ದಿನಾಂಕ: 21.02.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಸಾಕ್ಷಿಯ ಪ್ರಮಾಣೀಕೃತ ಹೇಳಿಕೆ:**

ನಾನು ಈ ಕೇಸಿನ ಪಿರ್ಯಾದಿ ಆಗಿದ್ದು ನನ್ನ ಪ್ರಮಾಣ ಪತ್ರವನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದನ್ನು ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ. ಅದರಲ್ಲಿರುವ ವಿಷಯಗಳೆಲ್ಲ ನನ್ನ ತಿಳುವಳಿಕೆ ಮಟ್ಟಿಗೆ ಸತ್ಯವಾಗಿರುತ್ತದೆ ಹಾಗೂ ಅದರಲ್ಲಿರುವ ಸಹಿ ನನ್ನದಾಗಿರುತ್ತದೆ. ಅದನ್ನು ನನ್ನ ಪ್ರಮಾಣೀಕೃತ ಹೇಳಿಕೆಯನ್ನಾಗಿ ಪರಿಗಣಿಸಬೇಕಾಗಿ ಕೇಳಿಕೊಳ್ಳುತ್ತೇನೆ. ನಾನು ಈ ಕೆಳಕಂಡ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

1. ದಿನಾಂಕ:01.02.2020 ರ ಸಂಘದ ಕಾರ್ಯಾಕಾರಿ ಮಂಡಳಿಯ ಸಭೆಯ ವರದಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ–1 ಎಂದು, ಎಂದು ಗುರುತಿಸಲಾಯಿತು.

2. ಆರೋಪಿಯು ಸಂಘಕ್ಕೆ ರಾಜಿನಾಮೆ ನೀಡಿದ ಅರ್ಜಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ–2 ಎಂದು, ಗುರುತಿಸಲಾಯಿತು

3. ದಿನಾಂಕ: 06.09.2013 ರ ಹೊಸ ಕರ್ಯಾದರ್ಶಿ ನೇಮಕಾತಿಯ ಠರಾವಿನ ದೃಢಿಕೃತ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಸಿ–3 ಎಂದು ಗುರುತಿಸಲಾಯಿತು.

4. ದಿನಾಂಕ:02.12.2016 ರಂದು ಹೊಸ ಕಾರ್ಯದರ್ಶಿ ನೇಮಕಾತಿಯ ಬಗ್ಗೆ ಪ್ರಾಚಾರ್ಯಾರಿಗೆ ಕೊಟ್ಟ ಪತ್ರದ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ-4 ಎಂದು ಗುರುತಿಸಲಾಯಿತು.

5. ದಿನಾಂಕ:07.12.2016 ರಂದು ಹೊಸ ಕಾರ್ಯದರ್ಶಿ ನೇಮಕಾತಿಯ ಬಗ್ಗೆ ಮ್ಯಾನೇಜರ್ ಕೆ ವಿಜಿ ಬ್ಯಾಂಕ್ ಗೆ ಕೊಟ್ಟ ಪತ್ರದ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ–5 ಎಂದು ಗುರುತಿಸಲಾಯಿತು.

6. ದಿನಾಂಕ:07.12.2016 ರಂದು ಹೊಸ ಕಾರ್ಯದರ್ಶಿ ನೇಮಕಾತಿಯ ಬಗ್ಗೆ ಮ್ಯಾನೇಜರ್ ಕೆನರಾ ಬ್ಯಾಂಕ್ ಗೆ ಕೊಟ್ಟ ಪತ್ರದ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ–6 ಎಂದು ಗುರುತಿಸಲಾಯಿತು.

7. ಉಪ ನಿರ್ದೇಶಕರು ಪದವಿಪೂರ್ವ ಶಿಕ್ಷಣ ಇಲಾಖೆ ಇವರಿಗೆ ದಿನಾಂಕ: 31.01.2017 ರಂದು ಬರೆದ ಪತ್ರದ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ-7 ಎಂದು ಗುರುತಿಸಲಾಯಿತು.

8. ದಿನಾಂಕಃ 28.08.2018 ರಂದು ಆರೋಪಿರವರು ಪ್ರಾಚಾರ್ಯರಿಗೆ ಕೊಟ್ಟ ಪತ್ರದ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ–8 ಎಂದು ಗುರುತಿಸಲಾಯಿತು.

9. ದಿನಾಕಃ 24.06.2017 ರಂದು ಆರೋಪಿರವರು ಉಪ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಹಾವೇರಿರವ ರಿಗೆ ಕೊಟ್ಟ ಪತ್ರದ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ–9 ಎಂದು ಗುರುತಿಸಲಾಯಿತು.

10. ದಿನಾಂಕಃ 30.04.2019 ರ ಆರೋಪಿರವರು ರಜೆ ಹಾಗೂ ವೇತನ ಮಂಜೂರು ಮಾಡಿದ ಪತ್ರದ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ–10 ಎಂದು ಗುರುತಿಸಲಾಯಿತು.

11. ದಿನಾಂಕಃ 26.11.2019 ರಂದು ಜಿಲ್ಲಾ ಸಂಘಗಳ ನೊಂದಾಣಾಧಿಕಾರಿಗಳು ಹಾವೇರಿ ಯವರು ಕೊಟ್ಟ ನೋಟಿಸಿದ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ–11 ಎಂದು ಗುರುತಿಸಲಾಯಿತು.

12. ದಿನಾಂಕಃ 19.11.2019 ರಂದು ಜಿಲ್ಲಾ ಸಂಘಗಳ ನೊಂದಾಣಾಧಿಕಾರಿಗಳು ಹಾವೇರಿ ರವರಿಗೆ ನವೀಕರಣದ ಬಗ್ಗೆ ಕೊಟ್ಟ ಪತ್ರದ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ–12 ಎಂದು ಗುರುತಿಸಲಾಯಿತು.

(ಮುಂದುವರೆದ ಸ್ವಇಚ್ಛಾ ಹೇಳಿಕೆಗೆ ಪಿರ್ಯಾದಿಯ ಪರ ವಕೀಲರು ಸಮಾಯವಾಕಾಶ ಕೋರಿದ್ದು ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.